ಎನ್.ಟಿ.ಆರ್. ಅವರ ಸರಕಾರ ಕೂಡ ಹಣ ಬಿಡುಗಡೆ ಮಾಡಿತ್ತು. ಆದರೆ ಆ ಸ್ಟೋನ್‌ನಲ್ಲಿ ನನ್ನ ಹೆಸರು ಇಲ್ಲ. ಅಲ್ಲಿ ಪ್ರೊಟೋಕಾಲ್ ಮೈನ್‌ಟೇನ್ ಮಾಡಲಿಲ್ಲ. ಅದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದೆ. 3 ರೀತಿ ಕಾರ್ಡ್ ಪ್ರಿಂಟಾಗಿದೆ. ನನಗೆ ಅವಮಾನ ಮಾಡುತ್ತಿದ್ದಾರೆ. ಪ್ರೊಟೋಕಾಲ್ ಏನು ಇದೆ ಅದರಲ್ಲಿ ಸಮಿತಿ ಎನು ಇದೆ ಅದಕ್ಕೆ ತಾವು ಆದೇಶ ಕೊಡಬೇಕು.

ಶ್ರೀ ಸಿ. ಬೈರೇಗೌಡ : ಬಹಳ ಸಾರಿ ಇಲ್ಲಿ ಈ ರೀತಿಯ ವಿಷಯಗಳು ಪ್ರಸ್ತಾಪವಾಗಿದೆ.

ಅಧ್ಯಕ್ಷರು : ಸಭೆ ಸಮಾರಂಭಗಳಲ್ಲಿ ಶಾಸಕರಿಗೇನು ಗೌರವ ಕೊಡಬೇಕು ಆ ಗೌರವ ಕೊಡುವುದಕ್ಕೆ ತಾವು ವಿರ್ಪಾಡು ಮಾಡಿ. ನಾನು ಅವರಿಗೆ ಆದೇಶ ಕೊಟ್ಟಿದ್ದೇನೆ. ಶಾಸಕರಿಗೆ ಯಾವ ಗೌರವ ಸಿಗಬೇಕು ಯಾವ ಸ್ಥಾನ ಸಿಗಬೇಕು ಅದನ್ನು ಕೊಡುವ ವಿರ್ಪಾಡು ಮಾಡಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಅದು ಸರಕಾರ ಹೊರಡಿಸಿದ ನಿಯಮದಲ್ಲೇ ಇದೆ. ಸರಕಾರಿ ಕಾರ್ಯಕ್ರಮಗಳಲ್ಲಿ ಶಾಸಕರಿಗೆ ಪ್ರಾಧಾನ್ಯತೆ ಕೊಡಬೇಕೆಂದಿದೆ ಅದನ್ನು ಅದರಂತೆ ಕೊಡುತ್ತೇವೆ.

ಶಾಸನ ರಚನಾ ಕಾರ್ಯಕಲಾಪಗಳು.

(1) ಕರ್ನಾಟಕ ರೇಷ್ಮೆ ಹುಳುತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನಾ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ (ತಿದ್ದುಪಡಿ) ವಿಧೇಯಕ, 1994.

ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : (ಮಾನ್ಯ ರೇಷ್ಮೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ರೇಷ್ಮೆ ಹುಳ ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೇನೆಂದರೆ, "1994ರ ಕರ್ನಾಟಕ ರೇಷ್ಮೆ ಹುಳ ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ (ತಿದ್ದುಪಡಿ) ವಿಧೇಯಕ"ವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : (ಮಾನ್ಯ ರೇಷ್ಮೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1994ರ ಕರ್ನಾಟಕ ರೇಷ್ಮೆ ಹುಳ ತಳಿ, ರೇಷ್ಮೆ ಗೂಡು ಮತ್ತು ರೇಷ್ಮೆ ನೂಲು ಉತ್ಪಾದನೆ ಸರಬರಾಜು, ಹಂಚಿಕೆ ಮತ್ತು ಮಾರಾಟದ ನಿಯಂತ್ರಣ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

1993ರ ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ.

ಪರ್ಯಾಲೋಚನಾ ವಿಧೇಯಕ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 1993ರ ಕರ್ನಾಟಕ ವಿಧಾನ ಮಂಡಲದವರ ವೇತನಗಳ, ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ. ವಿವರಗಳನ್ನು ವಿಧೇಯಕದಲ್ಲಿ ನಮೂದಿಸಿದ್ದೇವೆ. ಅದರ ಜೊತೆಯಲ್ಲಿ ಕೆಲವು ತಿದ್ದುಪಡಿಗಳನ್ನು ಸೂಚಿಸುತ್ತಿದ್ದೇವೆ. ಬಹಳ ದಿವಸದಿಂದ ಶಾಸಕರ ಅವಶ್ಯಕತೆಯ ಆಧಾರದ ಮೇಲೆ ಈ ಬೇಡಿಕೆ ಇದ್ದು ಅದನ್ನು ಜಾರಿಗೆ ತರಬೇಕೆಂದು ಇಲ್ಲಿ ಇದನ್ನು ಮಂಡನೆ ಮಾಡಿದೆ. ಮತ್ತು ಇದನ್ನು ಸೆಪ್ಟೆಂಬರ್ 1 ರಿಂದ 93ನೇ ಸಾಲಿನಿಂದ ಜಾರಿಗೆ ತರಬೇಕೆಂದು ತಿದ್ದುಪಡಿಯನ್ನು ಮಂಡಿಸುತ್ತಿದ್ದೇವೆ. ಇದರಿಂದ ಅನಾವಶ್ಯಕ ಹೆಚ್ಚಳವೇನೂ ಆಗಿಲ್ಲ. ಇನ್ನು ಕಡಿಮೆ ಇದೆ. ಮಾನ್ಯ ಸಭೆಯವರು ಇದ್ಕಕೆ ಒಪ್ಪಿಗೆ ಕೊಡಬೇಕೆಂದು ವಿನಂತಿಸುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "1993ರ ಕರ್ನಾಟಕ ವಿಧಾನ ಮಂಡಲದವರ ವೇತನಗಳ ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು

ಖಂಡ 2

ಅಧ್ಯಕ್ಷರು : "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.)

ಖಂಡ 3ಕ್ಕೆ ತಿದ್ದುಪಡಿ :

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಈ ಕೆಳಕಂಡ ತಿದ್ದುಪಡಿಯನ್ನು ಖಂಡ 3 ಕ್ಕೆ ಮಂಡಿಸುತ್ತೇನೆ.

"That for Clause 3 of thd said Bill the following shall be substituted, namely :

"3. Amendment of Section 4 : In Section 4 of the Principal Act, -

(i) in sub-section (1), after the words "city of Bangalore, "the words" or within thirty kilometer from the limits of the city of Bangalore" shall be inserted.

(ii) in sub-section (2), the following shall be inserted at the end namely:

"He shall be entitled for an allowance of five thousand rupees per month for maintenance and upkeep of the residence and for layout and maintenance of gardens included in such residence."